# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org

ಸಂಖ್ಯೆ:SHQ/ORG.1/Geetha Gayana/131/2025-26/1915 ದಿನಾಂಕ:03.01.2026

ಜಿಲ್ಲಾ ಕಾರ್ಯದರ್ಶಿಯವರಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, ______________________ಜಿಲ್ಲೆ

ಮಾನ್ಯರೆ,

ವಿಷಯ:- ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆಗೆ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳನ್ನು ನಿಯೋಜಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆ ಮತ್ತು ಬಳ್ಳಾರಿ ಜಿಲ್ಲಾ ಸಂಸ್ಥೆ ಹಾಗೂ ಜಿಂದಾಲ್ ಆದರ್ಶ ವಿದ್ಯಾಲಯ, ಬಳ್ಳಾರಿ ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ:18.01.2026ರಂದು ಜಿಂದಾಲ್ ಆದರ್ಶ ವಿದ್ಯಾಲಯ, ಶಂಕರ್ ಗುಡ್ಡ, ತೋರಣಗಲ್ಲು, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ಇಲ್ಲಿ **ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್- ರೇಂಜರ್ಸ್‌ಗಳಿಗೆ ನಾಡೋಜ ಡಾ॥ ಗೊ.ರು. ಚನ್ನಬಸಪ್ಪನವರ ಹೆಸರಿನಲ್ಲಿ ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.** ಸ್ಪರ್ಧೆಯ ವಿವರಗಳು ಈ ಕೆಳಕಂಡಂತಿದೆ.

| | |
|---|---|
| ಸ್ಪರ್ಧೆ | ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್- ರೇಂಜರ್ಸ್‌ಗಳಿಗೆ **ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆ**. |
| ಸ್ಥಳ | ಜಿಂದಾಲ್ ಆದರ್ಶ ವಿದ್ಯಾಲಯ, ಶಂಕರ್ ಗುಡ್ಡ, ತೋರಣಗಲ್ಲು, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ. |
| ದಿನಾಂಕ | **18.01.2026ರ ಭಾನುವಾರದಂದು**<br>ಬಸ್ಸು/ರೈಲ್ವೆ ಅನುಕೂಲವಿದ್ದವರು ಈ ದಿನ ಬೆಳಗ್ಗೆ 8.00 ಗಂಟೆಯ ಒಳಗೆ ವರದಿ ಮಾಡಿಕೊಳ್ಳುವುದು. ಅನಾನುಕೂಲವಿದ್ದಲ್ಲಿ ಮಾತ್ರ ಹಿಂದಿನ ದಿನವೇ (ಅಂದರೆ17.01.2026ರಂದು) ರಾತ್ರಿ ತಲುಪುವುದು. ಬರುವ ಬಗ್ಗೆ ಮುಂಚಿತವಾಗಿ ಜಿಲ್ಲಾ ಸಂಸ್ಥೆಯವರು ಮೊದಲೇ ಪತ್ರದ ಮುಖೇನಾ ತಿಳಿಸಿದ್ದಲ್ಲಿ ಮಾತ್ರ, ಊಟ ಮತ್ತು ವಸತಿ ವ್ಯವಸ್ಥೆಯನ್ನು ಮಾಡಲಾಗುವುದು. ಪತ್ರ ಕಳುಹಿಸದೇ ಇದ್ದಲ್ಲಿ ಯಾವುದೇ ವ್ಯವಸ್ಥೆಯನ್ನು ಮಾಡಲಾಗುವುದಿಲ್ಲ. |
| ಹಾಜರಾಗುವ ಸಮಯ | ದಿನಾಂಕ: 18.01.2026ರಂದು ಬೆಳಗ್ಗೆ 8.00 ಗಂಟೆಗೆ |
| ಬಿಡುಗಡೆ ಸಮಯ | ದಿನಾಂಕ: 18.01.2026ರಂದು ಸಂಜೆ 6.00 ಗಂಟೆಗೆ |
| ಕಾರ್ಯಕ್ರಮದ ಸ್ಥಳಕ್ಕೆ ತಲುಪುವ ವಿಧಾನ | ಎಲ್ಲಾ ಭಾಗಗಳಿಂದ ಬರುವವರು ಆದಷ್ಟು ರೈಲ್ವೆ ಮೂಲಕ ತೋರಣಗಲ್ ರೈಲ್ವೆ ನಿಲ್ದಾಣದಲ್ಲಿ ಇಳಿದು, ಅಲ್ಲಿಂದ ಆಟೋ ಮೂಲಕ ಜಿಂದಾಲ್ ಆದರ್ಶ ವಿದ್ಯಾಲಯವನ್ನು ತಲುಪುವುದು. (10 ನಿಮಿಷ ಕಾಲ ಆಗುವುದು)<br>**ಅಥವಾ**<br>ಬಳ್ಳಾರಿ ಅಥವಾ ಹೊಸಪೇಟೆ ಬಸ್/ರೈಲ್ವೆ ನಿಲ್ದಾಣದಿಂದ ಬರುವವರು ಬಸ್ ಮೂಲಕ ಪ್ರಯಾಣಿಸಿ ತೋರಣಗಲ್ ಬಸ್ ನಿಲ್ದಾಣದಲ್ಲಿ ಇಳಿದು, ಅಲ್ಲಿಂದ ಆಟೋ ಮೂಲಕ ತಲುಪುವುದು. (ಬಳ್ಳಾರಿ ಅಥವಾ ಹೊಸಪೇಟೆಯಿಂದ ಒಂದು ಗಂಟೆ ಕಾಲ ಪ್ರಯಾಣ ಆಗುವುದು) |
| ಊಟೋಪಚಾರದ ವ್ಯವಸ್ಥೆ | ವ್ಯವಸ್ಥೆ ಮಾಡಲಾಗುವುದು. |
| ತರಬೇಕಾದ ವಸ್ತುಗಳು | ತಟ್ಟೆ, ಲೋಟ, ಪೆನ್ನು, ನೋಟ್ ಪುಸ್ತಕ, ವೈಯುಕ್ತಿಕ ಸಾಮಗ್ರಿಗಳು |
| ಯಾರು ಭಾಗವಹಿಸುವುದು | • **ವಿಭಾಗೀಯ ಮಟ್ಟದಲ್ಲಿ ಪ್ರಥಮ ಸ್ಥಾನವನ್ನು** ಪಡೆದಿರುವ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್- ರೇಂಜರ್ಸ್‌ಗಳನ್ನು, ಮಾತ್ರ ಸಂಪೂರ್ಣ ಸಮವಸ್ತ್ರದಲ್ಲಿ ಭಾಗವಹಿಸುವುದು |

| | |
|---|---|
| ಸ್ಪರ್ಧೆಯ ವಿವರಗಳು | 1. **06 ಕಬ್ಸ್ ಮತ್ತು 06 ಬುಲ್‌ಬುಲ್ಸ್ ಪ್ರತ್ಯೇಕ** ತಂಡವಾಗಿ ಹಾಡುವುದು<br>2. **08 ಸ್ಕೌಟ್ಸ್ ಮತ್ತು 08 ಗೈಡ್ಸ್‌ಗಳ ಪ್ರತ್ಯೇಕ** ತಂಡವಾಗಿ ಹಾಡುವುದು<br>3. **06 ರೋವರ್ಸ್ ಮತ್ತು 06 ರೇಂಜರ್ಸ್ ಪ್ರತ್ಯೇಕ** ತಂಡವಾಗಿ ಹಾಡುವುದು<br>4. ಪ್ರತಿಯೊಂದು ತಂಡಕ್ಕೆ **ಗರಿಷ್ಠ 6** ನಿಮಿಷ ಮಾತ್ರ ಹಾಡಲು ಕಾಲಾವಕಾಶ. (ನಿಲ್ಲುವುದು, ವಿವರಣೆ ನೀಡುವುದು ಎಲ್ಲವು ಸೇರಿ)<br>5. ಕಡ್ಡಾಯವಾಗಿ ಸ್ಕೌಟ್-ಗೈಡ್ ಸಮವಸ್ತ್ರ ಧರಿಸಿಕೊಂಡು ಹಾಡುವುದು.<br>6. ಗೀತಗಾಯನದಲ್ಲಿ ಭಾಗವಹಿಸುವ ಮಕ್ಕಳಿಗೆ ಹಾರ್ಮೋನಿಯಂ, ಚರ್ಮವಾದ್ಯಗಳು, ಗೆಜ್ಜೆ ಮತ್ತು ಕೊಳಲು ಇವುಗಳನ್ನು ಬಳಸಲು ಮಾತ್ರ ಅವಕಾಶ ನೀಡಲಾಗಿದೆ. ಎಲೆಕ್ಟ್ರಾನಿಕ್, **ಕರೋಕೆ, ಟ್ರ್ಯಾಕ್, ಪೆನ್‌ಡ್ರೈವ್, ಕ್ಯಾಸೆಟ್, ಇತ್ಯಾದಿಗಳನ್ನು ಬಳಸುವಂತಿಲ್ಲ. ಧ್ವನಿಮುದ್ರಿತ ಯಾವುದೇ ಉಪಕರಣಗಳನ್ನು ಬಳಸುವಂತಿಲ್ಲ.** (ಸ್ಪರ್ಧೆಗೆ ನಿಗಧಿಪಡಿಸಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅವರುಗಳೇ ವಾದ್ಯಗಳನ್ನು ನುಡಿಸಬಹುದು) |
| ಪ್ರಯಾಣ ಭತ್ಯೆ | ಹೋಗಿ ಬರುವ ಪ್ರಯಾಣ ಭತ್ಯೆಯನ್ನು ಆಯಾಯ ಶಾಲಾ/ಕಾಲೇಜು ನಿಧಿಯಿಂದ ಭರಿಸಿಕೊಳ್ಳುವುದು. |
| ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದವರ ಮೊಬೈಲ್ ಸಂಖ್ಯೆ | ಶ್ರೀಮತಿ ಮಲ್ಲೇಶ್ವರಿ ಬುಜಾರೆ, ಎಎಸ್‌ಓಸಿ, ಪ್ರಭಾರಿ ರೇಂಜರಿಂಗ್ ವಿಭಾಗ, ಬಳ್ಳಾರಿ - 7259115730<br>ಶ್ರೀ ಮಹಮದ್ ಷಫುದ್ದೀನ್, ಎಸ್.ಜಿ.ಎ, ಬಳ್ಳಾರಿ - 8217595985<br>ಶ್ರೀ. ವಿಜಯಸಿಂಹ, ಜಿಲ್ಲಾ ಕಾರ್ಯದರ್ಶಿ, ಬಳ್ಳಾರಿ - 9448915501<br>ಶ್ರೀ. ಎಂ. ಪ್ರಭಾಕರ್ ಭಟ್, ಎಸ್.ಓ.ಸಿ(ಸ್ಕೌ), ಕರ್ನಾಟಕ – 9448914540<br>ಶ್ರೀಮತಿ. ಸಿ. ಮಂಜುಳ, ಎಸ್.ಓ.ಸಿ(ಗೈ), ಕರ್ನಾಟಕ – 9482433516 |

ಸಂಘಟಕರುಗಳು ಮತ್ತು ಕಾರ್ಯದರ್ಶಿಗಳು ವಿಶೇಷ ಗಮನ ಹರಿಸಿ, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳಿಗೆ ಸಂಪೂರ್ಣ ಸಿದ್ಧತೆಯೊಂದಿಗೆ ಮೇಲ್ಕಂಡ ಗೀತಗಾಯನ ಸ್ಪರ್ಧೆಗೆ ನಿಯೋಜಿಸಲು ಕೋರಲಾಗಿದೆ. ಸ್ಪರ್ಧೆಗೆ ಭಾಗವಹಿಸುವ ಅಭ್ಯರ್ಥಿಗಳ ವಿವರಗಳನ್ನು ಬಗ್ಗೆ ದಿನಾಂಕ:10.01.2026ರ ಒಳಗಾಗಿ ರಾಜ್ಯ ಸಂಸ್ಥೆಗೆ ತಿಳಿಸುವುದು.

ಸ್ಕೌಟ್ಸ್-ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ರಾಜ್ಯ ಮುಖ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

**ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.**

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ಜಿಲ್ಲಾ ಸಂಸ್ಥೆ, ಬಳ್ಳಾರಿ ಜಿಲ್ಲೆ
2. ಮಾನ್ಯ ಪ್ರಾಂಶುಪಾಲರು, ಜಿಂದಾಲ್ ಆದರ್ಶ ವಿದ್ಯಾಲಯ, ಶಂಕರ್ ಗುಡ್ಡ, ತೋರಣಗಲ್ಲು, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ.
3. ಶ್ರೀಮತಿ ಮಲ್ಲೇಶ್ವರಿ ಬುಜಾರೆ, ಎಎಸ್‌ಓಸಿ, ಪ್ರಭಾರಿ ರೇಂಜರಿಂಗ್ ವಿಭಾಗ, ಭಾ.ಸ್ಕೌ&ಗೈ, ಬಳ್ಳಾರಿ ಜಿಲ್ಲೆ
4. ಎಎಸ್‌ಓಸಿ/ಡಿಓಟಿ/ಡಿಓ/ಎಸ್‌ಜಿವಿ/ಎಸ್‌ಜಿಎ, ಭಾ.ಸ್ಕೌ.&ಗೈ,